

ಎರಡನೆ ಮಾಳಿಗೆಯಲ್ಲಿ ಸ್ಟುಡಿಯೊ. ಮೆಟ್ಟಿಲೇರಿ ಸ್ಟುಡಿಯೊ ಪ್ರವೇಶಿಸಿ ಆಪ್ತಸಹಾಯಕಿಯೊಬ್ಬಳ ಸೂಚನೆಯಂತೆ ದೇಶಪಾಂಡೆಯನ್ನು ಕಾಯುತ್ತ ಕುಳಿತರು. ವೈಟಿಂಗ್ ರೂಮಿನ ಗೋಡೆಯ ಮೇಲೆ ನಗುತ್ತ ಹಾಡುತ್ತಿರುವ ಕ್ಲಿಯೊಳ ದೊಡ್ಡ ಚಿತ್ರಪಟ. ಕಲ್ಯಾಣಿ ಸತ್ತಿದ್ದರೆ ಅವಳ ಫೋಟೊ ಗೋಡೆಯ ಮೇಲಿರುತ್ತಿತ್ತಲ್ಲ ಎಂದು ರಾವ್ ತರ್ಕಿಸಿದರು. ಸಹಾಯಕಿ ಛೇಂಬರ್ ಕದ ತೆರೆದು, 'ಬನ್ನಿ' ಎಂದು ಕರೆದಳು. ಒಮ್ಮೆ ಇಬ್ಬರೇ ಸಂದರ್ಶಕರಿಗೆ ಅವಕಾಶ ಎಂದು ಸಾರುವ ಎರಡೇ ಕುರ್ಚಿಗಳಿವೆ. ಕೊಠಡಿ ಬೆಚ್ಚಗಿತ್ತು. ಸಹಾಯಕಿ ಕೂರಲು ಸನ್ನೆ ಮಾಡಿ ಹೋದಳು. ದೇಶಪಾಂಡೆ ಹಣಕಿ ಫೈಲೊಂದನ್ನು ಓದುತ್ತಿದ್ದನು.

ದೇಶಪಾಂಡೆಯ ಮುಖದಲ್ಲಿ ಧಾರವಾಡದ ಎರೆಮಣ್ಣಿನ ಚಹರೆ ಅನ್ನಬಹುದಾದ ಯಾವ ಲಕ್ಷಣವೂ ಇರಲಿಲ್ಲ. ಆತ್ಮೀಯ ಜವಾರಿತನವೂ ಕಾಣಲಿಲ್ಲ. ಚರ್ಮದ ಬಿಳಿ ಭಾರತದ ಬಣ್ಣದಂತಿರಲಿಲ್ಲ. ತಲೆ ಮತ್ತು ಗಡ್ಡದ ಕೂದಲು ಕೆಂಚಾಗಿತ್ತು. ಅವನ ಹಿಂದೆ ಗೋಡೆಯ ಮೇಲೆ ಕುಕೂ ಗಡಿಯಾರ ತೂಗುತ್ತಿತ್ತು. ದೇಶಪಾಂಡೆ ಸಹಾಯಕಿ ಕರೆದು ಅಚ್ಚ ಜರ್ಮನಿಯಲ್ಲಿ ಮಾತಾಡಿದನು. ಅಪರಿಚಿತ ವಿದೇಶಿ ವ್ಯಕ್ತಿ ದಾರಿಯಲ್ಲಿ ಎದುರಾದಾಗ ವಿಶ್ವಮಾನವರಿಗೆಲ್ಲ ಹೇಳುವಂತೆ 'ಹೆಲೊ' ಎಂದ. ಬೆಕಂತಲೇ ಭೇಟಿ ಖಾಸಗಿ ಸಲೀಸುತನಕ್ಕೆ ತೆರೆದುಕೊಳ್ಳಬಾರದೆಂದು ತೀರಾ ಅನೌಪಚಾರಿಕವಾಗಿ ವರ್ತಿಸುತ್ತಿದ್ದಾನೆಂದು ರಾವ್ ಮುಜುಗರದಿಂದ ಮುದುಡಿ ಕುಳಿತರು. ಆಕಾಶವಾಣಿಯ ಸ್ಟುಡಿಯೊದಲ್ಲಿ ದಿನದ ಕಾರ್ಯಕ್ರಮ ಪಟ್ಟಿ ಓದುತ್ತಿದ್ದ ತಾನು, ಮುದ್ರಿತ ಧ್ವನಿ ತರಂಗದ ಮೂಲಕ ಪ್ರಸಾರವಾಗುವ ಕಲಾವಿದರು, ರೇಡಿಯೊ ಮುಂದೆ ಕುಳಿತು ಕೇಳುವವವರು ಎಲ್ಲ ಅಗೋಚರ ಪ್ರಪಂಚಕ್ಕೆ ಸೇರಿದವರಾದರೂ ನಿಜವೆನಿಸುತ್ತಿದ್ದರು. ಈ ಪ್ರತ್ಯಕ್ಷ ದೇಶಪಾಂಡೆ ಒಬ್ಬ ಮಿಥ್ಯಾ ಮನುಷ್ಯ. 'ನೀವು ಕರ್ನಾಟಕ ಕಾಲೇಜಲ್ಲಿ ಅಪ್ಪನಿಗೆ ಒಂದು ವರ್ಷ ಸೀನಿಯರಂತೆ' ಸರಕಾರಿ ಕಚೇರಿಯ ಒರಟು ಗಾಂಭೀರ್ಯದಿಂದ ಸನ್ನಿವೇಶ ಕೃತ್ರಿಮವಾಗಬಾರದೆಂದು ಸುಬ್ರೊ ಮಂಡಿಸಿದ್ದ ಪ್ರಸ್ತಾವನೆಯನ್ನು ನಿರ್ಲಕ್ಷಿಸಿದ ದೇಶಪಾಂಡೆ ಸಾರ್ವಜನಿಕರಿಂದ ಅಹವಾಲು ಪಡೆಯುವಂತೆ, 'ಇರಬೌದು, ಸಾರಿ. ಬಹಳ ವರ್ಷ ಆಯ್ತಲ್ಲ ಊರು ಬಿಟ್ಟು ನೆನಪಾಗೋದಿಲ್ಲ' ಎಂದ. ಅವನ ನೋಟ ಮತ್ತು ಮಾತಿನಲ್ಲಿ ದೂರ ಕಾಯ್ದುಕೊಳ್ಳುವ ನಿರ್ಭಾವುಕ ಒರಸೆಯಿತ್ತು. ವೈಯಕ್ತಿಕ ಜೀವತಂತುಗಳನ್ನು ಕತ್ತರಿಸಿದ ಶುಷ್ಕ ದನಿಯಲ್ಲಿ ವಾಣಿಜ್ಯ ವ್ಯಾಪಾರಿ ಸರಕಿನ ಘಾಟಿತ್ತು. ಸೌಜನ್ಯಕ್ಕೂ ತನ್ನೂರಿಂದ ಬಂದವರೆಂಬ ಅಭಿಮಾನ ತೋರಿಸಲಿಲ್ಲ. ಮನುಷ್ಯ ಸಹಜ ಕುತೂಹಲವೂ ಇರಲಿಲ್ಲ. 'ಅಪ್ಪ ಕ್ಲಿಯೊ ಹಾಡಿನ ಅಭಿಮಾನಿ' ಎಂದ. ತೆಳು ಮುಗಳ್ನಗು ಮುಖದಲ್ಲಿ ಮೂಡಿತು. ಈ ಮಹಾಶಯ ಡಿಜಿಟಲ್ ಜೀವಗಳನ್ನು ಮಾತ್ರ ಗೌರವಿಸುವುದು ಎಂದು ಅಸ್ಪಷ್ಟ ನಗುವಿನ ನೆರಿಗೆಗಳು ಸಾಕ್ಷಿ ಹೇಳಿದವು. ಸುಬ್ರೊಗೆ ಕೆಟ್ಟದೆನಿಸಿತು. 'ಕ್ಲಿಯೊ ಎಲ್ಲಿರ್‍ತಾರೆ? ನೋಡಲಿಕ್ಕೆ ಅವಕಾಶ ಇದೆಯಾ?' ರಾವ್ ಯಾಚನೆಗೆ ದೇಶಪಾಂಡೆ, 'ಅವಳು ಎಲ್ಲಿರ್‍ತಾರೆ ಹೇಗೆ ಹೇಳೋದು. ಅದು ಟ್ರೇಡ್ ಸೀಕ್ರೆಟ್. ಅವಳು ಹುಟ್ಟಲೂ ಇಲ್ಲ; ಸಾಯುವುದೂ ಇಲ್ಲ. ಇರ್‍ತಾಳೆ ಅಷ್ಟೆ' ಎಂದ. ಕಲ್ಯಾಣಿಯ ಬಗ್ಗೆ ತೀವ್ರ ಖೇದವಾಯಿತು. ಅವನ ಒಗಟಿನಂತ ಮಾತಿಗಿಂತ ಕಲ್ಯಾಣಿಯನ್ನು ಹುಡುಕುತ್ತ ಬಂದ ಅಪ್ಪ ಅವಳ ಬಗ್ಗೆ ತಾಳಿದ ಮೌನ ಸುಬ್ರೊಗೆ ವಿಚಿತ್ರವೆನಿಸಿತು. ಕಾಡಿನ ಆಳದಲ್ಲೆಲ್ಲೋ ಕೋಗಿಲೆ ಹಾಡುತ್ತಿರುವ ಕಾಲದ ಹಾಡಿಗೆ ಕಲ್ಯಾಣಿ ತಲೆದೂಗುತ್ತಿರಬಹುದು ಎಂಬ ಕಲ್ಪನಾ ವಿಲಾಸಕ್ಕೆ ಖುಷಿ ಪಡುತ್ತಾ ರಾವ್ ಎದ್ದರು. ಸಹಾಯಕಿ ಬಂದು ದಿನಾಂಕ ಟಿಕ್ ಮಾಡಿದ ಡೈರಿ ತೋರಿಸಿದಳು. 'ನನಗೆ ಮೀಟಿಂಗಿದೆ' ಎಂದು ದೇಶಪಾಂಡೆ ಕರ್ಟನ್ ತಳ್ಳಿ ಒಳ ನಡೆದ. ●